**ಅ. ದಾ. ಸಂ. ಃ 273/2015**
**ಪಿ . ಡಬ್ಲ್ಯೂ ಃ 02**

**ದಿನಾಂಕ ಃ 17-06-2023 ರಂದು** ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಂದುವರೆದ ಪಾಟೀ ಸವಾಲು ಃ- ಪ್ರತಿವಾದಿಯ ಪರ ಶ್ರೀ.ಎಸ್.ಸಿ. ಆರ್, ವಕೀಲರಿಂದ ಃ-**

ನಿಪಿ-9 ನ್ನು ನನಗೆ ಬಿ. ಎಸ್ ರೇಣುಕರವರು ಬರೆದುಕೊಟ್ಟಿರುತ್ತಾರೆ. ನನಗೆ ಕನ್ನಡ ಭಾಷೆಯನ್ನು ಓದಲು ಮತ್ತು ಬರೆಯಲು ಬರುತ್ತದೆ. ಬಿ. ಎಸ್ ರೇಣುಕರವರು ಈ ದಾವೆಯಲ್ಲಿ ಪಕ್ಷಕಾರರು ಅಲ್ಲ ಎಂದರೆ ಸರಿಯಲ್ಲ. ವಾದಪತ್ರದಲ್ಲಿ ರೇಣುಕ ಎಂದು ಮಾತ್ರ ನಮೂದಾಗಿದೆ ಎಂದರೆ ಸರಿ. ಈ ದಾವೆಯಲ್ಲಿ ಇರುವ 1(ಎ) ಮತ್ತು 1(ಬಿ) ವಾದಿಗಳು ರೇಣುಕ ಮತ್ತು ಮದನ್ ಮೋಹನ್ ರವರ ಮಕ್ಕಳು. 1(ಎ) ವಾದಿಯು ಪ್ರಾಪ್ತರಾಗಿರುತ್ತಾರೆ ಮತ್ತು 1(ಬಿ) ವಾದಿಯು ಅಪ್ರಾಪ್ತರಾಗಿರುತ್ತಾರೆ. ರೇಣುಕರವರು ಅವರ ಅಪ್ರಾಪ್ತ ಮಗಳ ಪರವಾಗಿ ವಿಶೇಷ ಅಧಿಕಾರ ಪತ್ರವನ್ನು ನೀಡಲು ಆಗುವುದಿಲ್ಲ ಎಂದರೆ ಸರಿಯಲ್ಲ. 1(ಎ) ಮತ್ತು 1(ಬಿ) ವಾದಿಗಳು ಬೆಂಗಳೂರಿನ ಅಶ್ವತ್ ನಗರದಲ್ಲಿ 30 ರಿಂದ 40 ವರ್ಷಗಳಿಂದ ವಾಸಿಸುತ್ತಿದ್ದಾರೆ. 1 ನೇ ವಾದಿಯೂ 40 ವರ್ಷಗಳಿಂದ ಅಲ್ಲಿಯೇ ವಾಸಿಸುತ್ತಿದ್ದರು.

1 ನೇ ವಾದಿಯು ನನ್ನ ಚಿಕ್ಕತಾತನಾದ ಆಂಜನಪ್ಪನವರ ಮಗನಾದ ರಾಮಚಂದ್ರಯ್ಯನವರ ಮಗ. ನಿಪಿ-9 ರಲ್ಲಿ "ನೀವು ಮತ್ತು ನಾವುಗಳು ಒಬ್ಬರಿಗೊಬ್ಬರು ಪರಿಚಯಸ್ಥರಾಗಿದ್ದೇವೆ " ಎಂದು ನಮೂದಾಗಿದೆ ಎಂದರೆ ಸರಿ. ನಿಪಿ-9 ರಲ್ಲಿ 1 ನೇ ವಾದಿಯು ನನಗೆ ಯಾವ ರೀತಿಯಲ್ಲಿ ಸಂಬಂಧಿಕರು ಎಂದು ಬರೆಸಿರುವುದಿಲ್ಲ. ನಿಪಿ-9 ನ್ನು ಬೆಂಗಳೂರಿನಲ್ಲಿ ತಯಾರಿಸಲಾಗಿದೆ.

ರಾಮನಗರದ ವಕೀಲರಾದ ಶಿವಕುಮಾರ್ ರವರು ನಿಪಿ-9 ನ್ನು ತಯಾರು ಮಾಡಿರುತ್ತಾರೆ. ನಿಪಿ-9 ನ್ನು ನೋಟರಿಯವರಾದ ನಾಗಪ್ಪನವರ ಮುಂದೆ ಮಾಡಲಾಗಿರುತ್ತದೆ. ನಿಪಿ-9 ರಲ್ಲಿ ನಮೂದಾಗಿರುವ ಸಹಿಗಳನ್ನು ನೋಟರಿಯವರೇ ಗುರುತಿಸಿರುತ್ತಾರೆ. ಆ ಸಮಯದಲ್ಲಿ ನಾನು, ನೋಟರಿಯವರು, ವಕೀಲರಾದ ಶಿವಕುಮಾರ್ ಮತ್ತು 1(ಎ) ಮತ್ತು 1(ಬಿ) ವಾದಿಗಳು ಹಾಜರಿದ್ದರು.

1(ಎ) ವಾದಿಯು ಅವರ ಮನೆಯ ಜವಬ್ದಾರಿಯನ್ನು 1 ನೇ ವಾದಿಯು ಮೃತಪಟ್ಟ ಬಳಿಕ ಅವರೇ ನಿರ್ವಹಿಸುತ್ತಿದ್ದಾರೆ. 1(ಎ) ವಾದಿಗೆ ವ್ಯವಹಾರದ ಜ್ಞಾನ ಇದೆ. 1(ಎ) ವಾದಿಯೇ ಈ ದಾವೆಯನ್ನು ನಡೆಸಬಹುದು ಎಂದರೆ ಅವರಿಗೆ ಬರಲು ಆಗದ ಕಾರಣ ನಾನೇ ಅವರ ಪರವಾಗಿ ನ್ಯಾಯಾಲಯಕ್ಕೆ ಬಂದಿರುತ್ತೇನೆ. ನಿಪಿ-7 ನ್ನು ನಾನೇ ಸೃಷ್ಟಿ ಮಾಡಿ ಪ್ರತಿವಾದಿಗೆ ಸೇರಿದ ಆಸ್ತಿಯನ್ನು ಲಪಟಾಯಿಸುವ ಉದ್ದೇಶದಿಂದ ನ್ಯಾಯಾಲಯಕ್ಕೆ ಬಂದಿರುತ್ತೇನೆ ಎಂದರೆ ಸರಿಯಲ್ಲ.

ವಾದಪತ್ರವನ್ನು 1 ನೇ ವಾದಿಯು ತಮ್ಮ ವಕೀಲರಿಗೆ ಹೇಳಿ ಬರೆಸಿದ್ದಾರೆ . ನನ್ನ ಮುಖ್ಯ ವಿಚಾರಣೆಯ ಪ್ರಮಾಣಪತ್ರವನ್ನು 1(ಎ) ವಾದಿಯು ಹೇಳಿ ಬರೆಸಿರುತ್ತಾರೆ. ನಾನು ದಾವಾಪತ್ರದಲ್ಲಿ ಹೇಳಿರುವ ಹಾಗೆ ದಿ.28-03-1946 ರಲ್ಲಿ ಆಂಜನಪ್ಪನವರಿಂದ ದಾವಾ ಆಸ್ತಿಯನ್ನು ಖರೀದಿ ಮಾಡಿರುತ್ತಾರೆ. ಆಂಜನಪ್ಪನವರು ಮೂಲ ವಾದಿಯ ತಾತನಾಗಿರುತ್ತಾರೆ. ಆಂಜನಪ್ಪನವರಿಗೆ ಒಬ್ಬನೇ ಮಗನಿರುತ್ತಾನೆ ಅವರೇ ಪ್ರತಿವಾದಿ. ಆಂಜನಪ್ಪವರಿಗೆ ಬೇರೆ ಯಾವ ಮಕ್ಕಳು ಇಲ್ಲ ಎಂದು ತೋರಿಸಲು ನಾನು ನ್ಯಾಯಾಲಯಕ್ಕೆ ವಂಶವೃಕ್ಷವನ್ನು ಹಾಕಿರುತ್ತೇನೆ. ನಿಪಿ-8 ನ್ನು ವಕೀಲರಾದ ಶಿವಕುಮಾರ್ ರವರು ತಯಾರು ಮಾಡಿರುತ್ತಾರೆ. ನಾನು ನೀಡಿದ ಮಾಹಿತಿ ಮೇರೆಗೆ ನಿಪಿ-8 ನ್ನು ತಯಾರು

ಮಾಡಲಾಗಿದೆ. ನಿಪಿ-8 ನ್ನು ಮಾಡುವಂತೆ ನಾನು ತಹಶೀಲ್ದಾರವರಿಗೆ ಅರ್ಜಿಯನ್ನು ಸಲ್ಲಿಸಿರುವುದಿಲ್ಲ ಮತ್ತು ಅವರು ಕೂಲಂಕುಷವಾಗಿ ಬಂದು ಸ್ಥಳ ಪರಿಶೀಲನೆ ಮತ್ತು ವಿಚಾರಣೆ ಮಾಡಿರುವುದಿಲ್ಲ. ನಿಪಿ-8 ನ್ನು ಮಾಡುವಾಗ ಮೂಲ ವಾದಿಯು ಬದುಕಿದ್ದರು. ನಿಪಿ-8 ನ್ನು ಮೂಲ ವಾದಿಯು ನನ್ನ ಅಣತಿಯಂತೆ ಮಾಡಿರುತ್ತಾರೆ.

ನಿಪಿ-7 ನ್ನು ನಮೂದಾಗಿರುವ ಚಿಕ್ಕೆಗೌಡರವರು ಪ್ರತಿವಾದಿಯ ಚಿಕ್ಕಪ್ಪ. ಚಿಕ್ಕೇಗೌಡರಿಗೂ ಮತ್ತು ಆಂಜನಪ್ಪನವರಿಗೂ ಯಾವುದೇ ಸಂಬಂಧ ಇಲ್ಲ. ಸಂಬಂಧ ಇಲ್ಲದೇ ಇದ್ದರೂ ಚಿಕ್ಕೆಗೌಡರ ಹೆಸರು ನಿಪಿ-7 ರಲ್ಲಿ ಹೇಗೆ ಬಂದಿತು ಎಂದರೆ ಅವರು ಬೇರೆಯವರಿಂದ ಆಸ್ತಿಯನ್ನು ಖರೀದಿ ಮಾಡಿದ್ದರು. ಚಿಕ್ಕೇ ಗೌಡರು ಯಾವಾಗ ಮೃತಪಟ್ಟಿರುತ್ತಾರೆಂದು ನನಗೆ ಗೊತ್ತಿಲ್ಲ. ಚಿಕ್ಕೇಗೌಡರಿಗೆ ಹೆಂಡತಿ ಮಕ್ಕಳು ಇದ್ದಾರಾ ಎಂಬುದವರ ಬಗ್ಗೆ ನನಗೆ ಗೊತ್ತಿಲ್ಲ.

ಪ್ರತಿವಾದಿಯು ಹಾಕಿರುವ ಪ್ರತಿವಾದಪತ್ರದ ಬಗ್ಗೆ ನನಗೆ ಮಾಹಿತಿ ಇದೆ. ಸದರಿ ಪ್ರತಿವಾದಪತ್ರಕ್ಕೆ ನಾನು ರಿಜ್ಯಾಂಡರ್ ಸಲ್ಲಿಸಿರುವುದಿಲ್ಲ. ನಾನು ತಿಮ್ಮಸಂದ್ರದಲ್ಲಿ ಇಲ್ಲದ ಕಾರಣ ನನಗೆ ಸದರಿ ವಿಷಯದ ಬಗ್ಗೆ ಗೊತ್ತಿಲ್ಲ ಎಂದರೆ ಸರಿ. ಪ್ರತಿವಾದಿಗೆ ಅಣ್ಣ ತಮ್ಮಂದಿರು ಇದ್ದಾರೆ ಎಂದರೆ ಸರಿ. ಅವರ ಹೆಸರುಗಳು ರಾಮಣ್ಣ ಮತ್ತು ಗೋವಿಂದಪ್ಪ. ಪ್ರತಿವಾದಿ ಮತ್ತು ಅವರ ಅಣ್ಣ ತಮ್ಮಂದಿರ ನಡುವೆ ವಿಭಾಗವಾಗಿರುತ್ತದೆ. ಸರ್ವೆ ನಂ.54 ರಲ್ಲಿ ಇರುವ ಜಮೀನನ್ನು ಸಹ ಪ್ರತಿವಾದಿ ಮತ್ತು ಅವರ ಅಣ್ಣತಮ್ಮಂದಿರು ವಿಭಾಗ ಮಾಡಿಕೊಂಡಿದ್ದಾರೆ ಎಂದರೆ ನನಗೆ ಅದರ ಬಗ್ಗೆ ಗೊತ್ತಿಲ್ಲ. ಚಿಕ್ಕೇಗೌಡರಿಗೆ ತಿಮ್ಮಸಂದ್ರ ಗ್ರಾಮದ ಸರ್ವೆ ನಂ. 54 ರಲ್ಲಿ ಆಸ್ತಿ ಇತ್ತು ಎಂದರೆ ಸರಿ. ಚಿಕ್ಕೆಗೌಡರು ಮೃತಪಟ್ಟ

ನಂತರ ಅವರ ವಾರಸುದಾರರುಗಳು ಸದರಿ ಆಸ್ತಿಯನ್ನು ಅನುಭವಿಸಿಕೊಂಡು ಬರುತ್ತಿದ್ದಾರೆ. ಚಿಕ್ಕೆಗೌಡರ ವಾರಸುದಾರರುಗಳನ್ನು ಈ ದಾವೆಯಲ್ಲಿ ಪಕ್ಷಕಾರರನ್ನಾಗಿ ಮಾಡಿರುವುದಿಲ್ಲ.

**ಮುಂದುವರೆದ ಪಾಟೀ ಸವಾಲಿಗೆ ಪ್ರತಿವಾದಿಯ ಪರ ವಕೀಲರು ಸಮಯಕೋರಿದ್ದು, ಸಮಯ ನೀಡಲಾಯಿತು.**

**ಓ. ಹೇ. ಕೇ. ಸ. ಇ. ಎ. ಓಪ್ಪಿರುತ್ತಾರೆ,**

**2 ನೇ ಅ. ಸಿ. ಜ. ಮತ್ತು ಜೆ.ಎಂ.ಎಫ್.ಸಿ, ಮಾಗಡಿ.**